# ಕಾಳಿಯ ಮರ್ದನ ರಂಗಗೆ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 99.
2. **Note:** This kruti is not available in any other standard reference book that I referred.

ರಾಗ: ಸಾರಂಗ ತಾಳ: ಆದಿ

ಕಾಳಿಯ ಮರ್ದನ ರಂಗಗೆ, ಹೇಳೆ ಗೋಪಮ್ಮ ಬುದ್ಧಿ
ಕೇಳಲೊಲ್ಲನು ಎನ್ನ ಮಾತನು ॥ ಪ ॥

ದಿಟ್ಟ ನೀರೊಳು ಕಣ್ಣ ಮುಚ್ಚನೆ ಹೋಗಿ
ಬೆಟ್ಟಕೆ ಬೆನ್ನಾತು ನಿಂತನೆ
ಸಿಟ್ಟಿಲಿ ಕೋರೆದಾಡೆ ತಿವಿದನೆ ಅಹ
ಗಟ್ಟಿ ಉಕ್ಕಿನ ಕಂಬ ಒಡೆದು ಬಂದನೆ ॥ ೧ ॥

ಮೂರಡಿ ಭೂಮಿಯ ಬೇಡಿದನೆ, ನೃಪರ
ಬೇರನಳಿಯೆ ಕೊಡಲಿ ಪಿಡಿದನೆ
ನಾರಮಡಿಯನುಟ್ಟು ಬಂದನೆ, ಅಹ
ಚೋರತನದಿ ಪಾಲ್ ಬೆಣ್ಣೆಯ ತಿಂದನೆ ॥ ೨ ॥

ಬತ್ತಲೆ ನಾರಿಯರನಪ್ಪಿದ, ಹೋಗಿ
ಉತ್ತಮಾಶ್ವವವನು ಹತ್ತಿದ
ಹತ್ತವತಾರ ತಾಳಿದ, ನಮ್ಮ
ಭಕ್ತವತ್ಸಲ ಸ್ವಾಮಿ ಪುರಂದರ ವಿಠಲನು ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ದಿಟ್ಟ …… ಮುಚ್ಚನೆ** = ಮತ್ಸ್ಯಾವತಾರ

**ಬೆಟ್ಟಕೆ ಬೆನ್ನಾತು ನಿಂತನೆ** = ಕೂರ್ಮಾವತಾರ

**ಸಿಟ್ಟಿಲಿ ಕೋರೆದಾಡೆ ತಿವಿದನೆ** = ವರಾಹಾವತಾರ

**ಗಟ್ಟಿ ...... ಬಂದನೆ** = ನರಸಿಂಹಾವತಾರ

**ಮೂರಡಿ ಭೂಮಿಯ ಬೇಡಿದನೆ** = ವಾಮನಾವತಾರ

**ನೃಪರ .... ಕೊಡಲಿ ಪಿಡಿದನೆ** = ಪರಶುರಾಮಾವತಾರ

**ನಾರಮಡಿಯನುಟ್ಟು ಬಂದನೆ** = ರಾಮಾವತಾರ

**ಚೋರತನದಿ ...... ತಿಂದನೆ** = ಕೃಷ್ಣಾವತಾರ

**ಬತ್ತಲೆ ...... ಅಪ್ಪಿದ** = ಬೌಧಾವತಾರ

**ನಾರಿಯರು** = ತ್ರಿಪುರರ ಸತಿಯರು

**ಉತ್ತಮಾಶ್ವವವನು ಹತ್ತಿದ** = ಕಲ್ಕ್ಯಾವತಾರ

**Classification:** Keerthane
**Ankita:** purandara vittala
**Location:** NA
**Category:** Krishna Leele, dashavatara
**Sub-Category:** Krishna, dashavatara, ranga, gopi, buddi, niru, kannu, parvata, bhumi, kalla, benne, halu, nari, kudure,
**Pravachana:** NA
**Explanation:** NA